ಓ .ಎಸ್ . ನಂ.215/2015 ಪಿಡಬ್ಲ್ಯೂ: 01
ಶ್ರೀಮತಿ ಶಿವಮ್ಮ

ದಿನಾಂಕ: 10.09.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು:- ಶ್ರೀ ಎಂ.ಆರ್.ಕೆ ಪ್ರತಿವಾದಿ 2 ರಿಂದ 4ರ ಪರ ವಕೀಲರಿಂದ:

ನಾನು 8 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ಮತ್ತು ವಾದಿ ಮಹದೇವಶೆಟ್ಟಿ ಮದುವೆಯಾಗಿ ಸುಮಾರು 25 ವರ್ಷಗಳಾಗಿರುತ್ತದೆ. ನಾನು ಮದುವೆಯಾದಾಗ ನನಗೆ ಸುಮಾರು 18 ವರ್ಷ ವಯಸ್ಸಾಗಿರುತ್ತದೆ. ನನ್ನ ಗಂಡ ನನಗೆ ದೂರದ ಸಂಬಂಧಿಯಾಗಿರುತ್ತಾರೆ. ನಮ್ಮ ಮದುವೆಯ ಪೂರ್ವದಲ್ಲಿ ನಮ್ಮ ಗಂಡನವರ ಕುಟುಂಬದಲ್ಲಿ ನಡೆದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ಮಾಹಿತಿಯನ್ನು ನನಗೆ ನನ್ನ ಗಂಡನವರು ಹೇಳಿರುತ್ತಾರೆ. ನಾನು ಮದುವೆಯಾದಾಗ ನಮ್ಮ ಮಾವನವರಿಗೆ ಸುಮಾರು 55 ರಿಂದ 60 ವರ್ಷ ವಯಸ್ಸಾಗಿತ್ತು. ಈ ದಾವೆ ಸಲ್ಲಿಸುವ ಸಮಯದಲ್ಲಿ ನಾನು ವಕೀಲರ ಕಛೇರಿಗೆ ಹೋಗಿರುವುದಿಲ್ಲ. ನಿಪಿ-6 ರ ವಂಶವೃಕ್ಷ ಪ್ರಮಾಣ ಪತ್ರವನ್ನು ಯಾರು ಹೇಳಿ ಬರೆಸಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಪಿ-6 ವಂಶವೃಕ್ಷ ಪ್ರಮಾಣ ಪತ್ರವನ್ನು ಬರೆಸುವ ಸಮಯದಲ್ಲಿ ನಿಂಗರಾಜಮ್ಮ,ನಂಜಮ್ಮ, ಮಾದೇವ ಶೆಟ್ಟಿ ರವರುಗಳ ಆಧಾರ್ ಕಾರ್ಡ್‌ಗಳನ್ನು ನೀಡಿ ಬರೆಸಿರುತ್ತಾರೆ. ನಿಪಿ-6 ರ ವಂಶವೃಕ್ಷ ಪ್ರಮಾಣ ಪತ್ರವನ್ನು ಯಾರ ಬಳಿ ಬರೆಸಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಪಿ-6 ರ ವಂಶವೃಕ್ಷ ಪ್ರಮಾಣ ಪತ್ರದಲ್ಲಿ ಯಾರು ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಪಿ-6 ರ ವಂಶವೃಕ್ಷ ಪ್ರಮಾಣ ಪತ್ರ ಮಾಡಿಸುವ ಸಮಯದಲ್ಲಿ ನನ್ನ ಗಂಡನವರು ಯಾವುದಾದರು ಪ್ರಮಾಣ ಪತ್ರ ಬರೆದುಕೊಟ್ಟಿರುತ್ತಾರೆಂದರೇ, ಇರಬಹುದು. ನಿಪಿ-6 ರ ವಂಶವೃಕ್ಷ ಪ್ರಮಾಣ ಪತ್ರದೊಂದಿಗೆ ಸಲ್ಲಿಸಿರುವ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಪಡೆದುಕೊಳ್ಳಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಿಪಿ-6 ವಂಶವೃಕ್ಷ ಪ್ರಮಾಣ ಪತ್ರವನ್ನು

ಯಾವಾಗ ಪಡೆದುಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಪಿ–6ರ ವಂಶವೃಕ್ಷ ಪ್ರಮಾಣ ಪತ್ರವನ್ನು ಮಹದೇವ್ ಶೆಟ್ಟಿ ರವರು ಹೇಳಿ ಬರೆಸಿರುತ್ತಾರೆ ಎಂದು ನಮೂದಿದೆ ಎಂದರೆ ಸರಿಯಲ್ಲ. ನಿಪಿ–6 ರ ವಂಶವೃಕ್ಷ ಪ್ರಮಾಣ ಪತ್ರವನ್ನು ಈ ದಾವೆಯ ಸಲುವಾಗಿ ಬರೆಸಲಾಗಿದೆ ಎಂದರೆ ಸರಿ. ನಮ್ಮ ವಂಶದ ಪೂರ್ವಿಕರನ್ನು ತೋರಿಸಲು ನಿಪಿ–6 ವಂಶವೃಕ್ಷ ಪ್ರಮಾಣ ಪತ್ರವನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿ ಇರುವುದಿಲ್ಲ ಎಂದರೆ ಸರಿ. ನಿಪಿ–6 ವಂಶವೃಕ್ಷ ಪ್ರಮಾಣ ಪತ್ರವನ್ನು ನಮ್ಮ ಅನೂಕೂಲಕ್ಕೆ ತಕ್ಕಂತೆ ಬರೆಯಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನಾನು ನಮ್ಮ ದಾವ ಪತ್ರ ಹಾಗೂ ದಾವೆಯೊಂದಿಗೆ ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ನಿಪಿ–6ರ ವಂಶವೃಕ್ಷ ಪ್ರಮಾಣ ಪತ್ರದಲ್ಲಿ ನಿಂಗರಾಜಮ್ಮ ಎಂಬುವವರ ಹೆಸರು ನಮೂದಾಗಿಲ್ಲ ಎಂದರೆ ಸರಿ. ನಿಪಿ–6 ರ ವಂಶವೃಕ್ಷ ಪ್ರಮಾಣ ಪತ್ರದಲ್ಲಿ ವೀರಶೆಟ್ಟಿ ರವರು ಸೀರನಸಿದ್ಧ ಶೆಟ್ಟಿ ರವರ ಮಗ ಎಂದು ನಮೂದಾಗಿಲ್ಲ ಎಂದರೆ ಸರಿ. ವೀರಶೆಟ್ಟಿ ರವರ ಹೆಂಡತಿಯ ಹೆಸರು ಜಾನಕಮ್ಮ ಆಗಿರುತ್ತದೆ. ವೀರಶೆಟ್ಟಿ ಹಾಗೂ ಜಾನಕಮ್ಮ ರವರಿಗೆ ಮಾದಶೆಟ್ಟಿ ಮತ್ತು ವೀರಶೆಟ್ಟಿ ಎಂಬ ಇಬ್ಬರು ಮಕ್ಕಳಿರುತ್ತಾರೆ. ನಿಪಿ–6 ವಂಶವೃಕ್ಷ ಪ್ರಮಾಣ ಪತ್ರದಲ್ಲಿ ವೀರಶೆಟ್ಟಿ ಹಾಗೂ ಜಾನಕಮ್ಮ ರವರಿಗೆ ಮಾದಶೆಟ್ಟಿ ಮತ್ತು ವೀರಶೆಟ್ಟಿ ಎಂಬ ಇಬ್ಬರು ಮಕ್ಕಳಿರುವ ಬಗ್ಗೆ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ವೀರಶೆಟ್ಟಿ ಯವರ ಮಗ ಮಾದಶೆಟ್ಟಿ ಯವರ ಹೆಂಡತಿಯ ಹೆಸರು ಕಮಲಮ್ಮ ಎಂಬುದಾಗಿರುತ್ತದೆ.

ದಾವಾ ಪತ್ರದಲ್ಲಿ ನಮ್ಮ ಮೂಲ ಪುರುಷ ವೀರಶೆಟ್ಟಿ ಯಾವಾಗ ಮರಣ ಹೊಂದಿರುತ್ತಾರೆಂದು ನಮೂದಿಸಿರುತ್ತದೆಯೇ ಎಂದರೆ ನನಗೆ ಗೊತ್ತಿಲ್ಲ. ವೀರಶೆಟ್ಟಿ ಯವರು ಮರಣ ಹೊಂದಿದಾಗ ಅವರಿಗೆ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಆ ಸಂದರ್ಭಕ್ಕೆ ನಾನು

ಮದುವೆಯಾಗಿರಲಿಲ್ಲ ಎಂದು ನುಡಿಯುತ್ತಾರೆ. ಮಾದಶೆಟ್ಟಿ ರವರಿಗೆ ಪುಟ್ಟಮಾದಮ್ಮ ಎಂಬ ಹೆಂಡತಿ ಇರುತ್ತಾರೆ ಎಂದರೆ ಸರಿ. ಪುಟ್ಟಮಾದಮ್ಮ ನವರು ಮರಣ ಹೊಂದಿ ಸುಮಾರು 16 ವರ್ಷ ಆಗಿರಬಹುದು.

ಆ ಸಮಯದಲ್ಲಿ ಅವರಿಗೆ ಸುಮಾರು 76 ವರ್ಷ ವಯಸ್ಸಾಗಿತ್ತು. ವೀರಶೆಟ್ಟಿ ಯವರ ಮಗ ಮಾದಶೆಟ್ಟಿಯವರುನ್ನು ನಾನು ನೋಡಿರುವುದಿಲ್ಲ ಹಾಗೂ ಅವರು ಯಾವಾಗ ಮರಣ ಹೊಂದಿರುತ್ತಾರೆಂದು ನನಗೆ ಗೊತ್ತಿಲ್ಲ. ವೀರಶೆಟ್ಟಿ ಯವರ ಮಗ ಮಾದಶೆಟ್ಟಿ ಹಾಗೂ ಅವರ ಹೆಂಡತಿ ಪುಟ್ಟಮಾದಮ್ಮ ರವರುಗಳು ಯಾವಾಗ ಮರಣ ಹೊಂದಿರುತ್ತಾರೆಂದು ನನ್ನ ದಾವಾ ಪತ್ರದಲ್ಲಿ ನಮೂದಿಸಲು ನಮಗೆ ಯಾವುದಾದರು ತೊಂದರೆ ಇರುತ್ತದೆಯೇ ಎಂದರೆ ನನಗೆ ಗೊತ್ತಿಲ್ಲ. ವೀರಶೆಟ್ಟಿ ರವರು ಬೇರೆ ಯಾವ ಆಸ್ತಿಗಳನ್ನು ಹೊಂದಿದ್ದರೆಂದು ನನಗೆ ಗೊತ್ತಿಲ್ಲ.

ನನ್ನ ಗಂಡನವರು ಮರಣ ಹೊಂದಿದಾಗ ಅವರಿಗೆ ಸುಮಾರು 54 ವರ್ಷ ವಯಸ್ಸಾಗಿತ್ತು. ನನ್ನ ಗಂಡನವರು ಅವರ ಜೀವಿತ ಕಾಲದಲ್ಲಿ ದಾವಾ ಪೂರ್ವದಲ್ಲಿ ನಡೆದ ವ್ಯವಹಾರಗಳ ಬಗ್ಗೆ ನನಗೆ ತಿಳಿಸಿರುವ ಬಗ್ಗೆ ದಾವಾ ಪತ್ರದಲ್ಲಿ ಬರೆಸಿರುವುದಿಲ್ಲ. ನಿಪಿ-1 ಮತ್ತು 2 ರ ಕ್ರಯಪತ್ರದಲ್ಲಿ ದಾವಾಸ್ತಿಯು ಮಧುವಿನಹಳ್ಳಿ ಗ್ರಾಮದ ಮಡಿವಾಳ ರ ಬೀದಿಯಲ್ಲಿ ಇರುತ್ತದೆ ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಪಿ-1 ಮತ್ತು 2ರ ಕ್ರಯ ಪತ್ರದಲ್ಲಿ ಸ್ವತ್ತಿನ ವಿಸ್ತೀರ್ಣವನ್ನು ಅಡಿಗಳಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಾವು 1898ರ ಕ್ರಯ ಪತ್ರವನ್ನು ಹಾಜರು ಪಡಿಸಿರುತ್ತೇವೆ. ಸದರಿ ಕ್ರಯ ಪತ್ರದ ಮೂಲಕ ನಮ್ಮ ಮಾವನವರು ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೆ. ನಮ್ಮ ಮಾವನವರ ತಂದೆಯ ಹೆಸರು ಸೀರನ ಸಿದ್ಧಶೆಟ್ಟಿ ಆಗಿರುವುದಿಲ್ಲ ಎಂದರೆ ಸರಿ.

ನಿಪಿ-1 ಮತ್ತು 2ರ ಕ್ರಯ ಪತ್ರವನ್ನು ಮೂಗಶೆಟ್ಟಿ ರವರಿಂದ ಮಾದಶೆಟ್ಟಿ ರವರು ಬರೆಸಿಕೊಂಡಿರುತ್ತಾರೆ. ಮೂಗಶೆಟ್ಟಿರವರಿಗೆ ಸದರಿ ಆಸ್ತಿಯು ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಮೂಗಶೆಟ್ಟಿ ರವರಿಗೆ ದಾವಾಸ್ತಿಯು ಯಾವ ರೀತಿ ಬಂದಿರುತ್ತದೆ ಎಂದು ನಮ್ಮ ದಾವಾ ಪತ್ರದಲ್ಲಿ ನಮೂದಿಸಿಲ್ಲ ಎಂದರೇ, ಇರಬಹುದು. ನಿಪಿ-1 ಮತ್ತು 2 ರ ಕ್ರಯಪತ್ರದಲ್ಲಿ ಸ್ವತ್ತಿನ ವಿವರ ದೋಚನ ನಾಗನ ಮನೆಗೂ ದಾರಿಗೂ ಮೂಡಲು, ಸಿದ್ಧಿ ಮಗ ಮಸಣನ ಮನೆಗೆ ಪಡುವಲು,

ದಾರಿಗೆ ತೆಂಕಲು, ಚೆನ್ನರಸನ ಮನೆಗೂ ಬಡಗಲು ಎಂದು ನಮೂದಿಸಿದೆ ಎಂದರೆ ಸರಿ. ದಾವಾ ಪತ್ರದ ಶೆಡ್ಯೂಲ್ ನಲ್ಲಿ ನಿಪಿ–1 ಮತ್ತು 2 ರ ಕ್ರಯ ಪತ್ರದಲ್ಲಿರುವಂತೆ ಚೆಕ್ಕುಬಂದಿ ಬರೆಸಿರುವುದಿಲ್ಲ ಎಂದರೆ ಸರಿ.

ನಾವು ಒಂದು ಆಸ್ತಿಯನ್ನು ನಮೂದಿಸಿ ದಾವೆ ಸಲ್ಲಿಸಿರುತ್ತೇವೆ. ಸಿದ್ಧಶೆಟ್ಟಿ ರವರ ಮಗ ವೀರಶೆಟ್ಟಿ 1898ರಲ್ಲಿ ಕ್ರಯಕ್ಕೆ ಪಡೆದಿರುವ ಸ್ವತ್ತುಗಳಿಗೆ ಖಾತೆ ಹೊಂದಿರುವ ಬಗ್ಗೆ ಅಥವಾ ಅವರು ಕಂದಾಯ ಪಾವತಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಗಂಡನವರ ಜೀವಿತ ಕಾಲದಲ್ಲಿ ದಾವಾ ಸ್ವತ್ತಿನ ಖಾತೆಯನ್ನು ವರ್ಗಾಯಿಸಿಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. ದಾವಾಸ್ತಿಯ ಖಾತೆಯು ನಮ್ಮ ಮಾವನವರ ಹೆಸರಿನಲ್ಲಿ ಇರುತ್ತದೆಯೇ ಎಂದರೆ ಕ್ರಯ ಪತ್ರ ಇರುತ್ತದೆ ಎಂದು ನುಡಿಯುತ್ತಾರೆ. ದಾವಾಸ್ತಿಯ ಖಾತೆಯು ನಮ್ಮ ಮಾವನವರ ತಂದೆ ಹಾಗೂ ತಾತನವರ ಹೆಸರಿನಲ್ಲಿ ಇರುವುದಿಲ್ಲ. ನನ್ನ ಗಂಡನ ಮರಣದ ನಂತರ ದಾವಾಸ್ತಿಯ ಖಾತೆಯ ವರ್ಗಾವಣೆ ಕೋರಿ ನಾನು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ.

ನಾವು ದಿನಾಂಕಃ01.08.1986ರ ಕ್ರಯಪತ್ರದ ಬಗ್ಗೆ ದಾವಾ ಪತ್ರದಲ್ಲಿ ನಮೂದಿಸಿರುತ್ತೇವೆ. ದಾವಾ ಸಲ್ಲಿಸುವ ಸಮಯದಲ್ಲಿ ದಾವಾ ಸ್ವತ್ತಿನಲ್ಲಿ ಶಿಥಿಲವಾದ ಮನೆ ಇರಲಿಲ್ಲ ಎಂದರೆ, ಖಾಲಿ ಜಾಗವಾಗಿತ್ತು. ದಾವಾ ಸ್ವತ್ತಿನಲ್ಲಿ ನಾಲ್ಕನೇ ಪ್ರತಿವಾದಿಯವರು ಮನೆ ನಿರ್ಮಿಸಿ ದಾವಾ ಸಲ್ಲಿಸುವ ಸಂದರ್ಭಕ್ಕೆ 04 ರಿಂದ 05 ವರ್ಷ ಆಗಿತ್ತು. ಸದರಿಯವರು ಮನೆ ನಿರ್ಮಿಸಲು ಅನುಮೋದನೆ ಹಾಗೂ ಅನುಮತಿ ಪಡೆದುಕೊಂಡಿದ್ದರು ಎಂದರೆ ಸರಿ. ನಾಲ್ಕನೇ ಪ್ರತಿವಾದಿಯವರ ಪರ ಯಾವುದೇ ಅನುಮೋದನೆ ಅಥವಾ ಅನುಮತಿ ನೀಡದಂತೆ ಗ್ರಾಮ ಪಂಚಾಯಿತಿಗೆ ನಾವು ತಕರಾರು ನೀಡಿರುವುದಿಲ್ಲ ಎಂದರೆ ಸರಿ. ನಾಲ್ಕನೇ ಪ್ರತಿವಾದಿಯವರು ಮನೆ ನಿರ್ಮಿಸುತ್ತಿದ್ದ ಸಂದರ್ಭದಲ್ಲಿ ದಾವೆ ಸಲ್ಲಿಸಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ನಮ್ಮ ಗಂಡನವರು ಈ ದಾವೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾವೆ ಸಲ್ಲಿಸಿರುವುದಿಲ್ಲ. ದಾವಾ ಪತ್ರದ ಷೆಡ್ಯೂಲ್ ನಲ್ಲಿ

ಚೆಕ್ಕುಬಂದಿಯನ್ನು ನಿಪಿ –3ರ ಕ್ರಯಪತ್ರದಂತೆ ನಮೂದಿಸಿರುತ್ತೇವೆ ಎಂದರೆ ಸರಿ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ